# ‘ಕೈಜಾರಿದ’ ಮೊಬೈಲ್ ಹುಡುಕುವ ಸಿಇಐಆರ್

**ಕೇಂದ್ರ ಸರ್ಕಾರದ ಡಿಜಿಟಲ್ ವೇದಿಕೆಯೊಂದು, ಕಳ್ಳತನವಾದ ಹಾಗೂ ಕಳೆದುಹೋದ ಮೊಬೈಲ್ ಅನ್ನು ಹಿಂಪಡೆಯಲು ಸಹಾಯ ಮಾಡಲಿದೆ.**

■ **ಶಶಿಕುಮಾರ್ ಸಿ.**




ಮೊಬೈಲ್ ಫೋನ್ ಕಳೆದುಹೋದರೆ ಅಥವಾ ಕಳ್ಳತನವಾದರೆ ದೂರು ನೀಡಿ ಅದನ್ನು ಮರಳಿ ಪಡೆಯಲು ಮಾಡುವ ಪ್ರಯತ್ನದ ಬದಲು, ಹೊಸ ಮೊಬೈಲ್ ಖರೀದಿಸುವುದು ಒಳಿತು ಎನ್ನುವುದು ಅನೇಕರ ಅನುಭವ. ಈ ನಂಬಿಕೆಯನ್ನು ಬದಲಿಸಿ, ಕಳೆದುಕೊಂಡ ಮೊಬೈಲ್‌ಗಳನ್ನು ಮರಳಿ ಪಡೆಯುವ ಸಾಧ್ಯತೆಗೆ ಕೇಂದ್ರ ಸರ್ಕಾರವು ಜೀವ ತುಂಬಿದೆ.

‘ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಫಿಕೇಷನ್ ರಿಜಿಸ್ಟರ್’ (ಸಿಇಐಆರ್) ಎಂಬ ಡಿಜಿಟಲ್ ವೇದಿಕೆಯೊಂದನ್ನು ಸರ್ಕಾರ ಈಚೆಗೆ ಶುರುಮಾಡಿದೆ. ಯಾರು ಎಲ್ಲಿಯೇ ಮೊಬೈಲ್ ಕಳೆದುಕೊಂಡರೂ ಅಥವಾ ಮೊಬೈಲ್ ಕಳ್ಳತನವಾಗಿದ್ದರೂ ಸಿಇಐಆರ್‌ಗೆ ದೂರು ನೀಡಬಹುದು. ದೂರು ಸ್ವೀಕರಿಸಿದ ಬಳಿಕ ಮೊಬೈಲ್ ಪತ್ತೆಗೆ ನೆರವಾಗುವ ‘ಸಿಇಐಆರ್’, ಮೊಬೈಲ್ ಸಿಕ್ಕ ಬಳಿಕ ಅದನ್ನು ಸಂಬಂಧಪಟ್ಟವರಿಗೆ ಹಿಂದಿರುಗಿಸಲು ನೆರವಾಗಲಿದೆ.

ಈಗಾಗಲೇ ‘ಸಿಇಐಆರ್’ನಲ್ಲಿ ದೂರು ನೋಂದಾಯಿಸಿಕೊಂಡವರ ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಹಿಂದಿರುಗಿಸಲಾಗಿದೆ. ರಾಜ್ಯದಲ್ಲೂ ಹಲವಾರು ಮೊಬೈಲ್‌ಗಳು ಪತ್ತೆಯಾದ ಉದಾಹರಣೆಗಳಿವೆ. ದೆಹಲಿ ಪೊಲೀಸ್, ಟೆಲಿಕಾಂ ಸಚಿವಾಲಯ ಮತ್ತು ಟೆಲಿಮ್ಯಾಟಿಕ್ಸ್ ಕೇಂದ್ರದ ಸಹಯೋಗದಲ್ಲಿ ‘ಸಿಇಐಆರ್’ ಅಭಿವೃದ್ಧಿಪಡಿಸಲಾಗಿದೆ.

## ಮೊಬೈಲ್ ಪತ್ತೆ ಹೇಗೆ?

ಮೊಬೈಲ್ ಕಳೆದುಕೊಂಡವರು ಹತ್ತಿರದ ಪೊಲೀಸ್ ಠಾಣೆಗೆ ತಕ್ಷಣ ದೂರು ನೀಡಬೇಕು. ದೂರಿನ ಪ್ರತಿಯನ್ನು ಪಡೆದುಕೊಂಡು, ನಂತರ ‘ಸಿಇಐಆರ್’ ವೆಬ್‌ಸೈಟ್‌ಗೆ ಲಾಗಿನ್ ಆಗಿ ಮೊಬೈಲ್ ಬ್ಲಾಕ್‌ಗೆ ಮನವಿ ಸಲ್ಲಿಸಬೇಕು. ಪೊಲೀಸ್ ದೂರು ನೀಡದೆಯೂ ನೇರವಾಗಿ ‘ಸಿಇಐಆರ್’ನಲ್ಲಿ ದೂರು ದಾಖಲಿಸಬಹುದು. ಆದರೆ ಇದು ಸರಿಯಾದ ವಿಧಾನವಲ್ಲ. ದೂರು ಸ್ವೀಕರಿಸುವ ‘ಸಿಇಐಆರ್’, ಮನವಿದಾರ ನೀಡುವ ಪ್ರತಿಯೊಂದು ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ‘ಐಎಂಇಐ’ ನಂಬರ್ ಆಧಾರದ ಮೇಲೆ ಮೊಬೈಲ್ ಕಾರ್ಯನಿರ್ವಹಿಸದಂತೆ ಬ್ಲಾಕ್ ಮಾಡಲಿದೆ.

ಒಂದುವೇಳೆ ಕಳೆದುಹೋದ ಮೊಬೈಲ್‌ನಲ್ಲಿ ಬೇರೊಂದು ಸಿಮ್ ಕಾರ್ಡ್ ಹಾಕಿದ್ದರೂ ಆ ಮಾಹಿತಿಯು ‘ಸಿಇಐಆರ್’ಗೆ ಲಭ್ಯವಾಗುತ್ತದೆ. ಆ ಮಾಹಿತಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ರವಾನಿಸಿ, ಆ ಸಿಮ್ ಕಾರ್ಡ್ ಬಳಕೆದಾರರನ್ನು ಪತ್ತೆಹಚ್ಚಿ ಮೊಬೈಲ್ ಜಪ್ತಿ ಮಾಡಿ ಸಂಬಂಧಪಟ್ಟವರಿಗೆ ಪೊಲೀಸರು ಹಿಂದಿರುಗಿಸುತ್ತಾರೆ.

## ಬ್ಲಾಕ್ ಏಕೆ ಮಾಡಬೇಕು?

ಬಹುತೇಕ ಬಳಕೆದಾರರು ತಮ್ಮ ವೈಯಕ್ತಿಕ ಮಾಹಿತಿಯನ್ನು ಮೊಬೈಲ್‌ನಲ್ಲಿ ಸ್ಟೋರ್ ಮಾಡಿರುತ್ತಾರೆ. ಹೀಗಿರುವಾಗ ಮೊಬೈಲ್ ಕಳೆದುಕೊಂಡರೆ ಅದರಲ್ಲಿನ ವೈಯಕ್ತಿಕ ಮಾಹಿತಿಯು ಅನ್ಯರ ಪಾಲಾಗುತ್ತದೆ. ವೈಯಕ್ತಿಕ ಮಾಹಿತಿ ಹಾಗೂ ಮೊಬೈಲ್ ಅನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ತಪ್ಪಿಸಲು ಬ್ಲಾಕ್ ಅನುವು ಮಾಡಿಕೊಡುತ್ತದೆ. ಕಳೆದುಹೋದ ಮೊಬೈಲ್ ಪತ್ತೆಯಾದ ಬಳಿಕ ಮತ್ತೆ ‘ಸಿಇಐಆರ್’ ವೆಬ್‌ಸೈಟ್‌ಗೆ ಹೋಗಿ, ಅನ್‌ಬ್ಲಾಕ್ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಮೊಬೈಲ್ ಬಳಸಬಹುದು.

## ಏನಿದು ‘ಐಎಂಇಐ?’

‘ಐಎಂಇಐ’ (ಇಂಟರ್‌ನ್ಯಾಷನಲ್ ಮೊಬೈಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ) ಅನ್ನುವುದು ಪ್ರತಿಯೊಂದು ಮೊಬೈಲ್‌ನ 15 ಅಂಕಿಗಳ ಯುನಿಕ್ ಐಡಿ. ಒಂದು ಮೊಬೈಲ್‌ನಲ್ಲಿ ಎಷ್ಟು ಸಿಮ್ ಅಳವಡಿಸಲು ಸಾಧ್ಯವೋ ಅಷ್ಟು ಪ್ರತ್ಯೇಕ ‘ಐಎಂಇಐ’ ಸಂಖ್ಯೆ ಇರುತ್ತದೆ. ಈ ನಂಬರ್ ಆಧಾರದ ಮೇಲೆಯೇ ಮೊಬೈಲ್ ನೆಟ್‌ವರ್ಕ್ ಕಾರ್ಯನಿರ್ವಹಿಸುತ್ತದೆ. ಒಂದು ಸಿಮ್‌ಗೆ ಒಂದು ‘ಐಎಂಇಐ’ ನಂಬರ್ ಕಡ್ಡಾಯ. ಈ ಸಂಖ್ಯೆಯನ್ನು ಬಳಸಿಕೊಂಡು, ಕಳವಾದ ಮೊಬೈಲ್ ಅನ್ನು ಹುಡುಕುತ್ತಾರೆ.

ಮೊಬೈಲ್ ಬಾಕ್ಸ್‌ನ ಹಿಂಭಾಗದಲ್ಲಿ ಅಥವಾ ಬಿಲ್ಲಿಂಗ್ ಸ್ಲಿಪ್‌ನಲ್ಲಿ ‘ಐಎಂಇಐ’ ನಂಬರ್ ಇರುತ್ತದೆ. ಇಲ್ಲವಾದಲ್ಲಿ ಮೊಬೈಲ್‌ನ ಡಯಲಿಂಗ್ ಕೀಪ್ಯಾಡ್‌ನಲ್ಲಿ *#06# ಎಂದು ನಮೂದಿಸಿದರೆ ಮೊಬೈಲ್‌ನ ‘ಐಎಂಇಐ’ ನಂಬರ್ ತೆರೆದುಕೊಳ್ಳುತ್ತದೆ. ಕಳೆದುಹೋದ ಮೇಲೆ ‘ಐಎಂಇಐ’ ನಂಬರ್‌ಗಾಗಿ ಈ ವಿಧಾನ ಅನುಸರಿಸುವುದು ಸಾಧ್ಯವಿಲ್ಲ. ಹೀಗಾಗಿ ಪ್ರತಿಯೊಬ್ಬರೂ ಈ ನಂಬರ್ ಅನ್ನು ಮುಂಚಿತವಾಗಿ ಎಲ್ಲಿಯಾದರೂ ನೋಟ್ ಮಾಡಿಟ್ಟುಕೊಂಡಿರುವುದು ಒಳಿತು.

## ಐಎಂಇಐ ನಂಬರ್ ತಿದ್ದಲು ಸಾಧ್ಯವೇ?

ಮೊಬೈಲ್ ಕಳ್ಳತನವಾದ ತಕ್ಷಣ ಖದೀಮರು ಅದರಲ್ಲಿನ ‘ಐಎಂಇಐ’ ನಂಬರ್ ತಿದ್ದಲು ಫ್ಲ್ಯಾಶ್ ತಂತ್ರಜ್ಞಾನ ಬಳಸುವ ಸಾಧ್ಯತೆಯಿರುತ್ತದೆ. ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳ ‘ಐಎಂಇಐ’ ನಂಬರ್ ತಿರುಚಿದಲ್ಲಿ ಅವುಗಳನ್ನು ಪತ್ತೆಹಚ್ಚಲು ಸಾಧ್ಯವಿಲ್ಲ. ಅದಕ್ಕಾಗಿಯೇ ಮೊಬೈಲ್ ಕಳೆದುಹೋದ ತಕ್ಷಣವೇ ಪೊಲೀಸರಿಗೆ ದೂರು ನೀಡುವುದರ ಜೊತೆಗೆ ‘ಸಿಇಐಆರ್’ ವೆಬ್‌ಸೈಟ್‌ನಲ್ಲೂ ದೂರು ದಾಖಲಿಸುವುದು ಅತ್ಯಗತ್ಯ.

## ದೂರು ಸಲ್ಲಿಸುವುದು ಹೇಗೆ?

- ಸಿಇಐಆರ್ ವೆಬ್‌ಸೈಟ್(https://www.ceir.gov.in/)ಗೆ ಭೇಟಿ ನೀಡಿ. ಮೊಬೈಲ್ ಬಳಕೆದಾರರ ಅನುಕೂಲಕ್ಕಾಗಿ ಸಿಇಐಆರ್ ಆ್ಯಪ್ ಅನ್ನೂ ಅಭಿವೃದ್ಧಿಪಡಿಸಲಾಗಿದೆ.
- ವೆಬ್‌ಸೈಟ್‌ನಲ್ಲಿ ಕಾಣುವ ಸಿಇಐಆರ್ ಸರ್ವಿಸ್ ಆಯ್ಕೆ ಕ್ಲಿಕ್ಕಿಸಿ.
- ನಂತರ ‘ಬ್ಲಾಕ್ ಸ್ಟೋಲನ್/ಲಾಸ್ಟ್ ಮೊಬೈಲ್’ ಆಯ್ಕೆ ಆಯ್ದುಕೊಳ್ಳಿ.
- ಬಳಿಕ ಅರ್ಜಿ ತೆರೆದುಕೊಳ್ಳುತ್ತದೆ. ಅದರಲ್ಲಿ ಅಗತ್ಯವಾದ ಎಲ್ಲ ಮಾಹಿತಿ ನಮೂದಿಸಿ.
- ಮೊಬೈಲ್ ಕಳವಾದಾಗ ಬಳಕೆಯಲ್ಲಿದ್ದ ಸಿಮ್ ನಂಬರ್ ನಮೂದಿಸಿ.
- ಒಟಿಪಿ ಎಂಟ್ರಿ ಮಾಡಿದ ಮೇಲೆ ಸಬ್‌ಮಿಟ್ ಮಾಡಿದರೆ ನಿಮ್ಮ ಕಾರ್ಯ ಅಲ್ಲಿಗೆ ಮುಕ್ತಾಯವಾಗುತ್ತದೆ.

■